









## ಕೀಟಗಳ ಸೂಕ್ಷ್ಮ ನೋಟ

ಪ್ರಕೃತಿಯಲ್ಲಿರುವ ಪ್ರತಿಯೊಂದು ಜೀವರಾಶಿ ಸುಂದರವಾಗಿ ಕಾಣುತ್ತವೆ. ಹತ್ತಿರದಿಂದ, ಸೂಕ್ಷ್ಮವಾಗಿ ಗಮನಿಸಿದಾಗ ಇನ್ನೂ ಚೆಂದ ಕಾಣುತ್ತವೆ ಮತ್ತು ಅಚ್ಚರಿ ಉಂಟಾಗುತ್ತದೆ. ಇದರಂತೆ ಕೀಟ ಪ್ರಪಂಚದ ವಿವಿಧ ಜಾತಿಯ ಕೀಟಗಳನ್ನು ಸೂಕ್ಷ್ಮವಾಗಿ ಎಲ್ಲರೂ ನೋಡುವಂತೆ ಕೃಷ್ಣ ಶ್ರೀಕಾಂತ ದೇವಾಂಗಮಠ ಎಂಬುವವರು ಮಾಡಿದ್ದಾರೆ.

ರಾಮದುರ್ಗದವರಾದ ಇವರು ಬೆಂಗಳೂರಿನ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಾ ಸೂಕ್ಷ್ಮಜೀವಿ ಫೋಟೊಗ್ರಾಫಿ ಹವ್ಯಾಸ ಹೊಂದಿದ್ದಾರೆ. ಚಿಕ್ಕಂದಿನಿಂದಲೂ ಪರಿಸರದ ಬಗ್ಗೆ ಕಾಳಜಿಯನ್ನು ಬೆಳೆಸಿಕೊಂಡ ಅವರು ಕಳೆದ ನಾಲ್ಕು ವರ್ಷಗಳಿಂದ ಕೀಟಗಳ ಆಹಾರ ಕ್ರಮ, ಬೇಟೆಯಾಡುವ ಚಾಣಾಕ್ಷತೆ, ಸಂತಾನಾಭಿವೃದ್ಧಿ, ಮರಿಗಳ ಪಾಲನೆ ಹೀಗೆ ಅವುಗಳ ಚಲನವಲನಗಳನ್ನೆಲ್ಲಾ ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ. ಕ್ರಿಮಿ ಕೀಟಗಳ ಫೋಟೊಗಳನ್ನು ನೋಡುವುದೇ ಆನಂದ. ಸಾಹಿತ್ಯದ ಅಭಿರುಚಿನ್ನೂ ಹೊಂದಿದ್ದಾರೆ. ಇವರ ಕೀಟಗಳ ಫೋಟೊ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಒಳಗೊಂಡಂತೆ ದೇಶದ, ನಾಡಿನ ವಿವಿಧ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಅಲ್ಲದೇ ವಿವಿಧ ಫೋಟೊ ಸ್ಪರ್ಧೆಗಳಲ್ಲಿ ಬಹುಮಾನವನ್ನು ಪಡೆದಿದ್ದಾರೆ.

—ಈರಣ್ಣ ಬೆಂಗಾಲಿ, ರಾಯಚೂರು

## ಇವಳೇ ಕಾಡಿನ ಚೆಲುವೆ ಕವಳೆ

ಬಹುತೇಕರು ಮರೆತಿರುವ ಕಾಡುಹಣ್ಣುಗಳಲ್ಲಿ ಕವಳೆ ಹಣ್ಣೂ ಒಂದು. ಇದು ಚಿಕ್ಕಪೊದೆಯಂತಹ ಮುಳ್ಳಿನ ಗಿಡ. ಮಲ್ಲಿಗೆಯಂತಹ ಹೂವು ಬಿಡುತ್ತದೆ. ಗೊಂಚಲು ಗೊಂಚಲುಗಳಲ್ಲಿ ಸಣ್ಣ ಸಣ್ಣ ಹಸಿರು ಗೋಲಿಗಳ ಕಾಯಿಗಳನ್ನು ಪೇರಿಸಿಕೊಂಡು ದಾರಿಹೋಕರನ್ನು ಕೈಬೀಸಿ ಕರೆಯುವ ಈ ಸಸ್ಯ ಕ್ಯಾರಂಡಸ್ ಎಂಬ ಜಾತಿಗೆ ಸೇರಿದ್ದು.

ಇದರ ಕಾಯಿ–ಹಣ್ಣುಗಳಿಗೆ ಕೈ ಹಾಕಿದರೆ ಅದರ ರಕ್ಷಣಾದಳದ ಮುಳ್ಳುಗಳು ಚುಚ್ಚಲೂಬಹುದು. ಕುರುಚಲು ಕಾಡು, ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲೂ ಸೊಂಪಾಗಿ ಬೆಳೆಯುತ್ತದೆ. ಇದರ ಹಣ್ಣು ಕಪ್ಪು ಗುಲಾಬಿ ಬಣ್ಣದಿಂದ ಕೂಡಿರುತ್ತವೆ. ತನ್ನೊಳಗೆ ಸಣ್ಣ ಬೀಜಗಳನ್ನು ಹೊಂದಿರುತ್ತದೆ. ಚಟ್ನಿಯಾಗಿಯೂ ಇದನ್ನು ಬಳಸುತ್ತಾರೆ. ಕವಳೆ ಹಣ್ಣು ಆಧುನಿಕತೆಯ ಭರಾಟೆಗೆ ಸಿಕ್ಕು ಸದ್ದಿಲ್ಲದೇ ಅವಸಾನದತ್ತ ಸಾಗಿರುವುದು ದುರದೃಷ್ಟಕರ. ಈಗಿನ ಮಕ್ಕಳಿಗೆ ಕವಳೆ, ಕಾರೆ, ಬಾರೆ, ಬಿಕ್ಕೆ, ಡಬ್ಬಳ ಮುಂತಾದ ಕಾಡುಹಣ್ಣುಗಳನ್ನು ಮತ್ತೆ ಪರಿಚಯಿಸಬೇಕಿದೆ. ಕವಳೆ ಫೆಬ್ರವರಿಯಲ್ಲಿ ಹೂ ಬಿಟ್ಟು ಏಪ್ರಿಲ್ ವೇಳೆಗೆ ಹಣ್ಣುಗಳನ್ನು ಬಿಡುವ ಕವಳೆ ವಿಟಮಿನ್ ಸಿ ಜೊತೆಗೆ ಹಲವು ಔಷಧೀಯ ಗುಣಗಳನ್ನು ಹೊಂದಿದೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

